**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.112/2019**

ಪ್ರಾ.ಸಾ. 3

ಚಾ.ಸಾ. 6

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 18.02.2025**

| | |
|---|---|
| ಸಾಕ್ಷಿದಾರರ ಹೆಸರು | ಸತೀಶ್ ಕುಮಾರ್ |
| ತಂದೆಯ ಹೆಸರು | ಚಿಕ್ಕಬೋರೇಗೌಡ |
| ವಯಸ್ಸು | 50 ವರ್ಷ |
| ಉದ್ಯೋಗ | ಎಲ್ ಐ ಸಿ ಏಜೆಂಟ್, ವ್ಯವಸಾಯ |
| ವಾಸ | ಹೊನಗಾನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.1 ನನ್ನ ಅಕ್ಕ. ಚಾಸಾ.2 ನನ್ನ ತಾಯಿ. ಚಾಸಾ.3 ನನ್ನ ತಮ್ಮ. ಅವರುಗಳು ತೊಂಡನಾಯನಕದೊಡ್ಡಿ ಹಳ್ಳಿಯಲ್ಲಿ ವಾಸ ಮಾಡಿಕೊಂಡಿದ್ದಾರೆ. ಚಾಸಾ.4 ಹಾಗೂ 5, 7 ಹಾಗೂ 8 ಗೊತ್ತು. ನನ್ನ ತಾಯಿಗೆ ಈಗ 75 ವರ್ಷ ವಯಸ್ಸು ಆಗಿದ್ದು, ಅವರ ಆರೋಗ್ಯ ಸರಿಯಿಲ್ಲ. ಹೀಗಾಗಿ ಹೊರಗೆ ಎಲ್ಲೂ ಓಡಾಡುತ್ತಿಲ್ಲ ಹೀಗಾಗಿ ನ್ಯಾಯಾಲಯಕ್ಕೆ ಬರಲು ಆಗುತ್ತಿಲ್ಲ. ನ್ಯಾಯಾಲಯದ ಮುಂದಿರುವ 1 ರಿಂದ 4, 6 ಆರೋಪಿತರು ಗೊತ್ತು. ಕೈಬಿಟ್ಟ ಆರೋಪಿತರಾದ 1 ಹಾಗೂ 5 ಗೊತ್ತು. ಅವರು ನಮ್ಮ ಊರಿನವರು. 5 ನೇ ಆರೋಪಿ ತೀರಿಕೊಂಡಿದ್ದಾರೆ. 2017 ರಲ್ಲಿ ನಾನು ತೊಂಡನಾಯನಕದೊಡ್ಡಿ ಹಳ್ಳಿಯಲ್ಲಿ ವಾಸ ಇದ್ದೆ. ಈಗ ಹೊನಗಾನಹಳ್ಳಿಯಲ್ಲಿ ವಾಸ ಇದ್ದೇನೆ.

2. ದಿನಾಂಕ 13.01.2017 ರಂದು ಬೆಳಗ್ಗೆ 7.30–8.00 ಗಂಟೆ ಸಮಯಕ್ಕೆ ಚಾಸಾ.1 ಮತ್ತು 2 ರವರು ಗದ್ದೆ ಹತ್ತಿರ ಹೋಗಿದ್ದರು. ಆಗ 1 ರಿಂದ 3 ನೇ ಆರೋಪಿತರು ಬಂದು ಚಾಸಾ.2 ರವರಿಗೆ ಹಲ್ಲೆ ಮಾಡಿರುತ್ತಾರೆ. ನಾನು ಮಂಡ್ಯದಲ್ಲಿ ಇದ್ದಾಗ ನನ್ನ ಅಕ್ಕ ಚಾಸಾ.1

ರವರು ನನಗೆ ಫೋನು ಮಾಡಿ ಹೇಳಿದರು. ಆಗ ನಾನು 9.30 ಗಂಟೆ ಸಮಯಕ್ಕೆ ಊರಿಗೆ ಬಂದಾಗ ಚಾಸಾ.2 ರವರ ಕೈಗಳು ಹಾಗೂ ಕಾಲಿಗೆ ಪೆಟ್ಟು ಆಗಿತ್ತು, ಅವರನ್ನು ಮಂಡ್ಯ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದೆನು.

3. ಅದೇ ದಿವಸ ಮದ್ಯಾಹ್ನ 2.00 - 2.15 ಗಂಟೆ ಸಮಯದಲ್ಲಿ ನಮ್ಮ ಗ್ರಾಮದಲ್ಲಿರುವ ಭತ್ತದ ಕಣದಲ್ಲಿ ಭತ್ತದ ಹುಲ್ಲಿನ ಮೆದೆಯನ್ನು ಹಾಕುತ್ತಿದ್ದೆವು. ಆಗ ಎಲ್ಲಾ ಆರೋಪಿತರು ಬಂದು ಗಲಾಟೆ ಮಾಡಿ 2 ನೇ ಆರೋಪಿ ಚಾಸಾ.3 ರವರಿಗೆ ಮಚ್ಚಿನಿಂದ ತಲೆಗೆ ಹೊಡೆದನು. ಇದರಿಂದ ಚಾಸಾ.3 ರವರಿಗೆ ತಲೆಯಿಂದ ರಕ್ತ ಬರುತ್ತಿತ್ತು. 3 ನೇ ಆರೋಪಿ ದೊಣ್ಣೆಯಿಂದ ಚಾಸಾ.3 ರವರ ಮಂಡಿಗೆ ಹೊಡೆದನು. 6 ನೇ ಆರೋಪಿ ಚಾಸಾ.3 ರವರ ಎದೆ ಮೇಲೆ ಹೊಡೆದನು. 2 ನೇ ಆರೋಪಿ ಕತ್ತು ಹಿಸುಕಿ ನಿನ್ನನ್ನು ಸಾಯಿಸುತ್ತೇನೆಂದು ಬೆದರಿಕೆ ಹಾಕಿದನು. 4 ನೇ ಆರೋಪಿತರು ಚಾಸಾ.1 ರವರಿಗೆ ದೊಣ್ಣೆಯಿಂದ ಮುಂಗೈಗೆ ಕಲ್ಲಿನಿಂದ ಕೈಗಳಿಗೆ ಹೊಡೆದರು. 2 ನೇ ಆರೋಪಿ ಚಾಸಾ.1 ರವರ ರವಿಕೆ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿದನು. ಚಾಸಾ.4 ಹಾಗೂ 5 ರವರು ಬಂದು ಗಲಾಟೆ ಬಿಡಿಸಿದರು. ಆಗ ಎಲ್ಲಾ ಆರೋಪಿತರು ನಮಗೆ ಇನ್ನೊಮ್ಮೆ ಇಲ್ಲಿ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದರು. ಈ ಎಲ್ಲಾ ವಿಷಯ ಊರಿನವರು ನನಗೆ ಫೋನು ಮಾಡಿ ತಿಳಿಸದಾಗ ನಾನು ವಾಪಸ್ ಊರಿಗೆ ಸಂಜೆ 4.30 ಗಂಟೆಗೆ ಬಂದು ನೋಡಿದಾಗ ಚಾಸಾ.1 ಹಾಗೂ 2 ರವರಿಗೆ ಪೆಟ್ಟಾಗಿದ್ದರಿಂದ ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದು ಕೊಂಡು ಹೋದೆನು.

4. ಚಿಕಿತ್ಸೆ ಪಡೆದುಕೊಂಡು ಚಾಸಾ.1 ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ. ನನ್ನ ಅಕ್ಕನ ಸೀರೆ ರವಿಕೆ ನ್ಯಾಯಾಲಯದ ಮುಂದಿರುವ ಮು.ಮಾ.6 ಹಾಗೂ 7 ಆಗಿರುತ್ತದೆ. ಹಲ್ಲೆ ಮಾಡಿದಂತಹ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಈ ಎಲ್ಲಾ ವಿಚಾರ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಎಂ ಆರ್ ವಕೀಲರಿಂದಃ</u>**

1. 1 ನೇ ಆರೋಪಿ ನನ್ನ ದೊಡ್ಡಪ್ಪನ ಮಗ. ನನ್ನ ಹಾಗೂ 1 ನೇ ಆರೋಪಿ ತಂದೆಯರು ಅಣ್ಣ ತಮ್ಮಂದಿರು. ನನ್ನ ತಂದೆಗೆ ಮೂರು ಜನ ಅಣ್ಣ ತಮ್ಮಂದಿರು. ಗಲಾಟೆ ನಾನು ಕಣ್ಣಾರೆ ಕಂಡಿಲ್ಲ ಎಂದರೆ ಸರಿ. ಯಾವ ಕಾರಣಕ್ಕಾಗಿ ಗಲಾಟೆ ಮಾಡಿದರು ಎಂದು ಅವರು ನನಗೆ ಹೇಳಲಿಲ್ಲ. ಆರೋಪಿತರು ಯಾವತ್ತೂ ನನ್ನ

ಮೇಲೆ ಹಲ್ಲೆ ಮಾಡಿರಲಿಲ್ಲ ಎಂದರೆ ಹಿಂದೆ ಹಲ್ಲೆ ಮಾಡಿದ್ದರು. ಈ ಸಂಬಂಧ ಕೇಸು ಹಾಕಿದ್ದು ಅದು ಈಗ ಮುಕ್ತಾಯಗೊಂಡಿರುತ್ತದೆ. ಸಿಸಿ 91/2016 ಮತ್ತು ಸಿಸಿ 93/2016 ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಈ ಕೇಸುಗಳು ಯಾವ ವಿಷಯಕ್ಕೆ ಸಂಭವಿಸಿತ್ತು ಎಂದು ಹೇಳಲು ಆಗುವುದಿಲ್ಲ. ನಮ್ಮ ಕುಟುಂಬದ ಸ್ವತ್ತುಗಳು ಹಾಗೂ ಆರೋಪಿತರ ಸ್ವತ್ತುಗಳು ಒಂದೇ ವಿಭಾಗದ ಅಡಿಯಲ್ಲಿ ಬಂದಿರುತ್ತದೆಂದರೆ ಸರಿ. ನಾವು ನೀಲಗಿರಿ ಮರ ನೆಟ್ಟಿ ಸೀಳುಗಳು ಅವರ ಜಮೀನಿಗೆ ಬಿದ್ದು, ಬೆಳೆ ಆಳು ಮಾಡುತ್ತಿದ್ದೇವೆಂದರೆ ಸರಿಯಲ್ಲ. ಈ ಬಗ್ಗೆ ಊರಿನಲ್ಲಿ ಪಂಚಾಯಿತಿ ನಡೆದು ಇತ್ಯರ್ಥ ಮಾಡಿದ್ದರು ಎಂದರೆ ಸರಿಯಲ್ಲ. ಮರದ ಬೇರು ದೊಡ್ಡದಾಗುತ್ತಿದೆ ಬೆಳೆಯಲು ಬಿಡಬೇಡಿ ಅಕ್ಕ ಪಕ್ಕ ಜಮೀನುಗಳಿಗೆ ತೊಂದರೆ ಆಗುತ್ತದೆಂದು ಊರಿನ ಯಜಮಾನರು ಪಂಚಾಯಿತಿಯಲ್ಲಿ ಹೇಳಿದ್ದರು ಎಂದರೆ ಗೊತ್ತಿಲ್ಲ. ನೀಲಗಿರಿ ಮರದ ವಿಷಯದಲ್ಲಿ ನಮ್ಮ ನಡುವೆ ವಿವಾದ ಇದೆ

2. ಚಾಸಾ.2 ರವರಿಗೆ ತುಂಬಾ ವಯಸ್ಸು ಆಗಿರುವುದರಿಂದ ಅವರು ಯಾವತ್ತೂ ಕೆಲಸಕ್ಕೆ ಹೋಗಲು ಆಗುವುದಿಲ್ಲ ಎಂದರೆ ಘಟನಾ ಸಮಯದಲ್ಲಿ ಚೆನ್ನಾಗಿದ್ದರು. ಚಾಸಾ.1 ರವರನ್ನು ತಂಗಳಗೆರೆಗೆ ಕೊಟ್ಟು ಮದುವೆ ಮಾಡಲಾಗಿದೆ. ಗಂಡನ ಮನೆಯಲ್ಲಿ ಆಕೆಯನ್ನು ನೋಡಿಕೊಳ್ಳುತ್ತಿಲ್ಲ ಹೀಗಾಗಿ ಆಕೆ ನಮ್ಮ ಮನೆಗೆ ಬಂದಿದ್ದಾಳೆ. ಆಕೆ ಮದುವೆಯಾದಾಗಿನಿಂದಲೂ ನಮ್ಮ ಮನೆಯಲ್ಲಿದ್ದಾಳೆ. ಆಕೆ ಬಂದಾಗಿನಿಂದ ಆರೋಪಿತರ ಮನೆಯವರೊಂದಿಗೆ ಒಂದಲ್ಲ ಒಂದು ಗಲಾಟೆ ಮಾಡುತ್ತಿದ್ದಾರೆಂದರೆ ಸರಿಯಲ್ಲ. ನಮ್ಮ ಅಕ್ಕ ಬಂದು ಸೇರಿಕೊಂಡಿದ್ದರಿಂದ ಕುಟುಂಬದಲ್ಲಿ ವೈಮನಸ್ಸು ಜಾಸ್ತಿ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಗ್ರಾಮ ಬಿಟ್ಟು ಸುಮಾರು 15 ವರ್ಷ ಆಗಿದೆ ಎಂದರೆ ಸರಿ. ಮುಂದುವರೆದು ಹೋಗಿ ಬಂದು ಮಾಡುತ್ತೇವೆ.

3. ಸದರಿ ದಿನಾಂಕದಂದು ಆರೋಪಿತರು ಜಮೀನಿಗೆ ಬಂದು ಚಾಸಾ.1 ಹಾಗೂ 2 ರವರಿಗೆ ಹಲ್ಲೆ ಮಾಡಿದಾಗ ನಾನು ದೂರು ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಘಟನೆ ಬಗ್ಗೆ ನಾನು ಆರೋಪಿತರೊಂದಿಗೆ ಮಾತುಕತೆ ಮಾಡಿರಲಿಲ್ಲ. ದಿನಾಂಕ 13.01.2017 ರಂದು ಮದ್ಯಾಹ್ನ 2.15 ಗಂಟೆ ಸಮಯಕ್ಕೆ ಆರೋಪಿತರು ಭತ್ತದ ಮೆದೆ ಹಾಕುತ್ತಿದ್ದರು ಆ ಸಮಯದಲ್ಲಿ ಚಾಸಾ.1 ಹಾಗೂ 3 ರವರು ಹೋಗಿ ಜಗಳ ಮಾಡಿ ಬಂದಿದ್ದಾರೆಂದರೆ ಸರಿಯಲ್ಲ. ಚಾಸಾ.1 ಹಾಗೂ 2 ರವರು ಆರೋಪಿತನ ವಿರುದ್ಧ ಸುಳ್ಳು ದೂರು ಕೊಟ್ಟು ಹಿಂಸೆ ಕೊಡುತ್ತಿದ್ದಾರೆಂದರೆ

ಸರಿಯಲ್ಲ. ನನ್ನ ತಾಯಿಗೆ ನಾನು ಚಿಕಿತ್ಸೆ ಕೊಡಿಸಿದ ಬಗ್ಗೆ ಬಿಲ್ಲನ್ನು ಪೊಲೀಸರಿಗೆ ಕೊಟ್ಟಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ಚಾಸಾ.1 ರಿಂದ 3 ರವರು ಆರೋಪಿತರ ಮೇಲಿನ ದ್ವೇಷ ಹಿಡಿದು ಸುಳ್ಳು ದಾಖಲೆ ಸೃಷ್ಟನೆ ಮಾಡಿಕೊಂಡು ಸುಳ್ಳು ಕೇಸು ಹಾಕಿದ್ದಾರೆಂದರೆ ಸರಿಯಲ್ಲ. ಮೇಲೆ ತಿಳಿಸಿದ ಯಾವುದೇ ಘಟನೆ ನಡೆಯದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.